Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 85/2018

ಫ್ರಾ.ಸಾ. 4 ಚಾ.ಸಾ. 7

| | | |
|---|---|---|
| ಹೆಸರು | : | ಪ್ರಹ್ಲಾದ ಜೋಶಿ |
| ತಂದೆಯ ಹೆಸರು | : | ವೆಂಕೋಬಾಚಾರಿ ಜೋಶಿ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ಸಹಾಯಕ ಉಪನ್ಯಾಸಕರು ಪದವಿ ಕಾಲೇಜು ಯಾದಗಿರಿ |
| ವಾಸ | : | ಯಾದಗಿರಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 01-07-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನನಗೆ ಚಾಸಾ-1 ರಿಂದ 6 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು. ದಿಃ 08.01.2018 ರಂದು ನಾನು ಎಂದಿನಂತೆ ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ-1 ರವರು ಈ ಪ್ರಕರಣದಲ್ಲಿ ಗಾಂಜಾ ಜಪ್ತಿ ಪಡಿಸಿಕೊಳ್ಳುವ ಪ್ರಕ್ರಿಯೇ ಇದ್ದು ಪತ್ರಾಂಕಿತ ಅಧಿಕಾರಿಯ ಸಮಕ್ಷಮದಲ್ಲಿ ಮಾಡುವ ಅವಶ್ಯಕತೆ ಇರುವದರಿಂದ ನಾನು ದಾಳಿಯ ಸಮಯದಲ್ಲಿ ಜೊತೆ ಬರುವಂತೆ ಕೋರಿರುತ್ತಾರೆ. ನಾನು ಅದಕ್ಕೆ ಒಪ್ಪಿ ಅವರ ಜೊತೆ ಬೆಳಿಗ್ಗೆ 10-30 ಅಥವಾ 11-00 ಗಂಟೆಗೆ ಹೊರಟಿರುತ್ತೇನೆ. ದಾರಿಯಲ್ಲಿ ಚಾಸಾ-2 ಮತ್ತು 3 ಶಿಕ್ಷಕರು ಸಹ ನಿಂತಿದ್ದು ಅವರಿಗೆ ಚಾಸಾ-1 ಬಾತ್ಮಿಯ ಬಗ್ಗೆ ತಿಳಿಸಿ ಪಂಚನಾಮೆಗೆ ಸಹಕರಿಸುವಂತೆ ಕೋರಿರುತ್ತಾರೆ. ಪಂಚರಾದ ಚಾಸಾ-2, 3 ಮತ್ತು ಪೊಲೀಸರಾದ ಚಾಸಾ-4 ಮತ್ತು 5 ರವರು ಚಾಸಾ-1 ರವರ ಜೊತೆ ನಾನು ಪೊಲೀಸ ವಾಹನದಲ್ಲಿ ಹೊರಟಿರುತ್ತೇವೆ. ನಾವು ಎಲ್ಲರೂ ಹೊಸ್ಸಳ್ಳಿ ಸೀಮಾ ಅಂಚಿನಲ್ಲಿ ಜೀಪನಿಂದ ಇಳಿದು ಹೊಲದ ಕಡೆಗೆ ಹೋಗುತ್ತಿದ್ದಾಗ ಅಲ್ಲಿ ಉಳ್ಳಾಗಡ್ಡಿ ಬೆಳೆದಿದ್ದು ಒಬ್ಬ ವ್ಯಕ್ತಿ ಕಸವನ್ನು ತೆಗೆಯುತ್ತಿದ್ದು ನಮ್ಮನ್ನು ನೋಡಿ ಹತ್ತಿ ಹೊಲದಲ್ಲಿ ಓಡಿ ಹೋದ. ಆಗ ಚಾಸಾ-1 ರವರು ಆತನ ಬಗ್ಗೆ ಅಕ್ಕ ಪಕ್ಕ ವಿಚಾರಿಸಿರುತ್ತಾರೆ. ಆಗ ಆತ ಈ ಪ್ರಕರಣದ ಆರೋಪಿ ಶರಣಪ್ಪ ತಂದೆ ಬಸ್ಸಪ್ಪ ಇರುತ್ತಾನೆ ಎಂದು ತಿಳಿಯಿತು. ಸದರಿ ಹೊಲದಲ್ಲಿ ಪರಿಶೀಲಿಸಿದ್ದು ಹೊಲದಲ್ಲಿ ಗಾಂಜಾ ಬೆಳೆದಿದ್ದ ಬಗ್ಗೆ ಚಾಸಾ-1 ರವರು ತಿಳಿಸಿದರು. ಅದನ್ನು ಚಾಸಾ-6 ದೇವರಾಜ ತೂಕ ಮಾಡಿರುತ್ತಾರೆ ಅದು 3 ಕೆ.ಜಿ. ಇದೆ ಎಂದು ಹೇಳಿದರು. ಅದರ

ಒಟ್ಟು ಕಿಮ್ಮತ್ತು 3,000/- ರೂ ಇರುತ್ತದೆ ಎಂದು ತಿಳಿಯಿತು. ಅದರಲ್ಲಿ 200 ಗ್ರಾಮ್ ನಷ್ಟು ಪ್ರತ್ಯೇಕ ಬಿಳಿ ಬಟ್ಟೆಯಲ್ಲಿ ತೆಗೆದು ಪ್ಯಾಕ ಮಾಡಿ ಮಾದರಿ ತೆಗೆದಿದ್ದು ಅದರ ಮೇಲೆ ಪಿ.ಎಸ್.ಆರ್. ಎಂದು ಸೀಲ್ ಮಾಡಿರುತ್ತಾರೆ ನಂತರ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ಪಂಚನಾಮೆಯನ್ನು ನಿ.ಪಿ.1 ರಂತೆ ಮಧ್ಯಾಹ್ನ 12-30 ರಿಂದ 1-30ರ ವರೆಗೆ ಬರೆದಿರುತ್ತಾರೆ. ನಿ.ಪಿ.1ರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಇದಕ್ಕೆ ಪೂರಕವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಮು.ಮಾ.1ನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅದರ ಮೇಲಿನ ಸಹಿಯನ್ನು ಮು.ಮಾ.1(ಬಿ) ಎಂದು ಗುರುತಿಸಲಾಯಿತು. ಮು.ಮಾ.1ರ ಮೇಲಿನ ಅರಗಿನ ಸೀಲು ಆರ್.ಎಸ್ ಎಂದು ಇರುವದು ಕಂಡು ಬರುತ್ತದೆ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ವಿ.ಆರ್.ಎಸ್. ವಕೀಲರಿಂದ</u>

2. ಬೆಳಿಗ್ಗೆ 8-10 ರಿಂದ ಮಧ್ಯಾಹ್ನ 1-30ರ ವರೆಗೆ ನಮ್ಮ ಕಾಲೇಜನ ಅವಧಿ ಇರುತ್ತದೆ. ನಮ್ಮದು 50 ನಿಮಿಷಗಳ ಅವದಿಯ ತರಗತಿಗಳು ಇರುತ್ತವೆ. ಚಾಸಾ-1 ರವರು ನಮ್ಮ ಕಾಲೇಜಗೆ ಬಂದಾಗ ಸುಮಾರು 10-45 ಗಂಟೆ ಆಗಿತ್ತು ಮತ್ತು ಆ ದಿನದ ನನ್ನ ತರಗತಿಗಳು ಮುಗಿದಿದ್ದವು. ನನಗೆ ಈ ಪ್ರಕರಣದಲ್ಲಿ ಚಾಸಾ-1 ರವರು ಸಾಕ್ಷಿದಾರನಾಗಲು ಯಾವುದೇ ತಿಳುವಳಿಕೆ ನೀಡಿಲ್ಲ. ನಾನು ಚಾಸಾ-1 ರವರ ಜೊತೆ ಸಾಕ್ಷಿದಾರನಾಗಿ ಹೋಗಲು ಯಾವುದೇ ಪುರ್ವಾನುಮತಿಯನ್ನು ನಮ್ಮ ಮೇಲಾಧಿಕಾರಿಯವರಿಂದ ಪಡೆದಿಲ್ಲ. ಬಂದಳ್ಳಿ ತಲುಪಿದಾಗ ಸುಮಾರು 11-15 ಗಂಟೆ ಆಗಿತ್ತು. ನನ್ನ ಸಮಕ್ಷಮ ಚಾಸಾ-2 ಮತ್ತು 3 ರವರಿಗೆ ಚಾಸಾ-1 ರವರು ನೊಟೀಸ ನೀಡಿಲ್ಲ. ನಾನು ಚಾಸಾ-6 ರವರನ್ನು ಅವರ ಅಂಗಡಿಯಲ್ಲಿ ನೋಡಿದ್ದು ಅಲ್ಲಿಯೇ ತೂಕ ಮಾಡಿರುತ್ತಾರೆ.

3. ಚಾಸಾ-1 ರವರು ಆರೋಪಿತನ ಹೊಲಕ್ಕೆ ಪ್ರವೇಶಿಸುವ ಮುನ್ನ ಶೋಧನಾ ವಾರಂಟ ತಯಾರಿಸಿಕೊಂಡು ಹೋದ ಬಗ್ಗೆ ನನಗೆ ಗೊತ್ತಿಲ್ಲ. ನಿ.ಪಿ.1 ಪಂಚನಾಮೆ ಕಾಲಕ್ಕೆ ಯಾವುದೇ ಭಾವಚಿತ್ರ ತೆಗೆದಿರುವದು ನೆನಪಿಲ್ಲ. ಸಾಮಾನ್ಯವಾಗಿ ತಿದ್ದುಪಡಿ ಮಾಡಿದಾಗ ಸಣ್ಣ ಸಹಿ ಮಾಡುತ್ತೇವೆ ಎಂದರೆ ಸರಿ. ನಿ.ಪಿ.1ರಲ್ಲಿ ಎರಡು ಕಡೆ ತಿದ್ದುಪಡಿ ಮಾಡಿದ್ದು ಸಣ್ಣ ಸಹಿಗಳನ್ನು ಮಾಡಿಲ್ಲ ಎಂದರೆ ಸರಿ. ನಾನು ಈ ಪ್ರಕರಣದ ಸಮಯದಲ್ಲಿ ಸ್ಥಳಕ್ಕೆ ಹೋದ ಸರಕಾರಿ ಜೀಪನ ನೊಂದಣಿ ಸಂಖ್ಯೆ ಹೇಳಲು ಬರುವುದಿಲ್ಲ. ಚಾಸಾ-6 ರವರ ಅಂಗಡಿಯಲ್ಲಿ ಬೇರು, ಖಾಂಡ ಮತ್ತು ಎಲೆ ಎಲ್ಲವೂಗಳನ್ನು ತೂಕ ಮಾಡಿರುತ್ತೇವೆ. ಈ ಪ್ರಕರಣದ ಘಟನಾ ಸ್ಥಳದ ಚೆಕ್ಕು ಬಂದಿ ಹೇಳಲು ನನಗೆ ಬರುವುದಿಲ್ಲ. ನಾನು ಈ ಪ್ರಕರಣದ ಪಂಚನಾಮೆಯ ನಂತರ ಮನೆಗೆ ಹಿಂದಿರುಗಿರುತ್ತೇನೆ. ಪೊಲೀಸರು ಈ ಪ್ರಕರಣದ ಪ್ರಕ್ರಿಯೇಯ ಬಗ್ಗೆ ನನ್ನ ಹೇಳಿಕೆಯನ್ನು

ಲಿಖಿತವಾಗಿ ಬರೆದುಕೊಂಡಿರುತ್ತಾರೆ. ಅದನ್ನು ಓದಿ ಹೇಳಿದ ಬಗ್ಗೆ ನನಗೆ ನೆನಪಿಲ್ಲ. ನನ್ನ ಹೇಳಿಕೆಯಲ್ಲಿ ಅವರು ಒಪ್ಪಿರುತ್ತಾರೆ ಎಂದು ಚಾಸಾ-1 ರವರು ದಾಖಲಿಸಿಕೊಂಡಿರುತ್ತಾರೆ ಎಂದರೆ ಸರಿ.

4. ದಿಃ 08.01.2018 ರಂದು ನಾನು ಎಂದಿನಂತೆ ಕರ್ತವ್ಯ ನಿರ್ವಹಿಸುತ್ತಿರುವಾಗ ಚಾಸಾ-1 ರವರು ಈ ಪ್ರಕರಣದಲ್ಲಿ ಗಾಂಜಾ ಜಪ್ತಿ ಪಡಿಸಿಕೊಳ್ಳುವ ಪ್ರಕ್ರಿಯೇ ಇದ್ದು ಪತ್ರಾಂಕಿತ ಅಧಿಕಾರಿಯ ಸಮಕ್ಷಮದಲ್ಲಿ ಮಾಡುವ ಅವಶ್ಯಕತೆ ಇರುವದರಿಂದ ನಾನು ದಾಳಿಯ ಸಮಯದಲ್ಲಿ ಜೊತೆ ಬರುವಂತೆ ಕೋರಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅದಕ್ಕೆ ಒಪ್ಪಿ ಅವರ ಜೊತೆ ಬೆಳಿಗ್ಗೆ 10-30 ಅಥವಾ 11-00 ಗಂಟೆಗೆ ಹೊರಟಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾರಿಯಲ್ಲಿ ಚಾಸಾ-2 ಮತ್ತು 3 ಶಿಕ್ಷಕರು ಸಹ ನಿಂತಿದ್ದು ಅವರಿಗೆ ಚಾಸಾ-1 ಬಾತ್ಮಿಯ ಬಗ್ಗೆ ತಿಳಿಸಿ ಪಂಚನಾಮೆಗೆ ಸಹಕರಿಸುವಂತೆ ಕೋರಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚರಾದ ಚಾಸಾ-2, 3 ಮತ್ತು ಪೊಲೀಸರಾದ ಚಾಸಾ-4 ಮತ್ತು 5 ರವರು ಚಾಸಾ-1 ರವರ ಜೊತೆ ನಾನು ಪೊಲೀಸ ವಾಹನದಲ್ಲಿ ಹೊರಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಎಲ್ಲರೂ ಹೊಸ್ಸಳ್ಳಿ ಸೀಮಾ ಅಂಚಿನಲ್ಲಿ ಜೀಪನಿಂದ ಇಳಿದು ಹೊಲದ ಕಡೆಗೆ ಹೋಗುತ್ತಿದ್ದಾಗ ಅಲ್ಲಿ ಉಳ್ಳಾಗಡ್ಡಿ ಬೆಳೆದಿದ್ದು ಒಬ್ಬ ವ್ಯಕ್ತಿ ಕಸವನ್ನು ತೆಗೆಯುತ್ತಿದ್ದು ನಮ್ಮನ್ನು ನೋಡಿ ಹತ್ತಿ ಹೊಲದಲ್ಲಿ ಓಡಿ ಹೋದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಚಾಸಾ-1 ರವರು ಆತನ ಬಗ್ಗೆ ಅಕ್ಕ ಪಕ್ಕ ವಿಚಾರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ಆತ ಈ ಪ್ರಕರಣದ ಆರೋಪಿ ಶರಣಪ್ಪ ತಂದೆ ಬಸಪ್ಪ ಇರುತ್ತಾನೆ ಎಂದು ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೊಲದಲ್ಲಿ ಪರಿಶೀಲಿಸಿದ್ದು ಹೊಲದಲ್ಲಿ ಗಾಂಜಾ ಬೆಳೆದಿದ್ದ ಬಗ್ಗೆ ಚಾಸಾ-1 ರವರು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಚಾಸಾ-6 ದೇವರಾಜ ತೂಕ ಮಾಡಿರುತ್ತಾರೆ ಅದು 3 ಕೆ.ಜಿ. ಇದೆ ಎಂದು ಹೇಳಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರ ಒಟ್ಟು ಕಿಮ್ಮತ್ತು 3,000/- ರೂ ಇರುತ್ತದೆ ಎಂದು ತಿಳಿಯಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ 200 ಗ್ರಾಮ್ ನಷ್ಟು ಪ್ರತ್ಯೇಕ ಬಿಳಿ ಬಟ್ಟೆಯಲ್ಲಿ ತೆಗೆದು ಪ್ಯಾಕ ಮಾಡಿ ಮಾದರಿ ತೆಗೆದಿದ್ದು ಅದರ ಮೇಲೆ ಪಿ.ಎಸ್.ಆರ್. ಎಂದು ಸೀಲ್ ಮಾಡಿರುತ್ತಾರೆ ನಂತರ ಸಹಿ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಪಂಚನಾಮೆಯನ್ನು ನಿ.ಪಿ.1 ರಂತೆ ಮಧ್ಯಾಹ್ನ 12-30 ರಿಂದ 1-30 ರ ವರೆಗೆ ಬರೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇದಕ್ಕೆ ಪೂರಕವಾಗಿ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ  ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.

Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆಃ 85/2018

ಪ್ರಾ.ಸಾ. 5 ಚಾ.ಸಾ. 6

| | | |
|---|---|---|
| ಹೆಸರು | : | ದೇವರಾಜ |
| ತಂದೆಯ ಹೆಸರು | : | ಬಸಪ್ಪ |
| ವಯಸ್ಸು | : | 38 ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸ | : | ಬಂದಳ್ಳಿ |

ಪ್ರಮಾಣ ವಚನ ಭೋಧಿಸಿದ ದಿನಾಂಕಃ 01-07-2025
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ಚಾಸಾ-1 ರಿಂದ 5 ಮತ್ತು 7 ರವರ ಪರಿಚಯ ಇಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿಯ ಪರಿಚಯ ಇಲ್ಲ. ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿರುವುದಿಲ್ಲ. ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ

2. ದಿಃ 08.01.2018 ರಂದು ಮಧ್ಯಾಹ 12-30 ಗಂಟೆಗೆ ಹೊಸಳ್ಳಿ ಸೀಮಾಂತರದಲ್ಲಿ ಆರೋಪಿ ತನ್ನ ಹತ್ತಿ ಹೊಲದಲ್ಲಿ ಗಾಂಜಾ ಬೆಳೆದಿದ್ದು ಅದನ್ನು ಚಾಸಾ-1, 2 ರಿಂದ 5 ಹಾಗೂ 7 ರವರು  ಜಪ್ತಿ ಪಡಿಸಿಕೊಂಡ ಮೇರೆಗೆ ನಾನು ಅದನ್ನು ತೂಕ ಮಾಡಿರುತ್ತೇನೆ ಅದು ಸುಮಾರು 3 ಕೆ.ಜಿ. ಇತ್ತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ಈಗ ವಿವರವಾಗಿ ಓ

ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.೩ ಎಂದು ಗುರುತಿಸಲಾಯಿತು.

೩. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ.ವಿ.ಆರ್.ಎಸ್. ವಕೀಲರಿಂದ</u>

-ಇಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.